# ಸರ್ವಕಾಲಕೂ ಸುಂದರ ದಾಲ್ಚಿನ್ನಿ ಮರ



**ದಟ್ಟ ಹಸುರು ತುಂಬಿ ಎಲ್ಲಾ ಕಾಲದಲ್ಲೂ ಸುಂದರವಾಗಿ ಕಂಗೊಳಿಸುವ ದಾಲ್ಚಿನ್ನಿ ಮರ, ಹಲವು ಬಗೆಯ ಹಕ್ಕಿಗಳಿಗೆ ಆಶ್ರಯತಾಣವೂ ಹೌದು.**

■ ವಿನು ಗಂಗೆ

ಯಾರಾದರೂ ನನ್ನನ್ನು, ನಾನು ಕಂಡ ಮರಗಳಲ್ಲೇ ಅತ್ಯಂತ ಚಂದದ ಮರ ಯಾವುದು ಅಂತ ಕೇಳಿದರೆ ಉತ್ತರ ಅಷ್ಟು ಸುಲಭವಲ್ಲ. ‘ಚಿಗುರಿದಾಗ ಚಂದಾಳ, ಹೂ ಅರಳಿದಾಗ ಕಕ್ಕೆ ಹಾಗೂ ಹೊಳೆ ದಾಸವಾಳ, ಬೀಜವಾದಾಗ ತಪಸಿ’ ಎಂದು ನಿಬಂಧನೆಗಳಿಗೆ ಒಳಪಟ್ಟ ಉತ್ತರ ಹೇಳಬಹುದೇನೋ. ಆದರೆ, ಸರ್ವಕಾಲ ಸುಂದರ ಅಂತ ಯಾವುದಾದರೂ ಮರಕ್ಕೆ ಹೇಳಬಹುದಾದರೆ ಅದು ನಿಸ್ಸಂದೇಹವಾಗಿ ದಾಲ್ಚಿನ್ನಿ ಮರ.

ನಿತ್ಯಹರಿದ್ವರ್ಣದ ಈ ಮರ ನಿತ್ಯ ಸೌಂದರ್ಯದಿಂದ ಕಂಗೊಳಿಸುವುದರಿಂದ ಹಾಗೂ ಒಳಗೇನಿದೆ ಎಂಬ ಕೌತುಕ ಕೆರಳಿಸುವ, ಸದಾ ಬಚ್ಚಿಡುವ ದಟ್ಟತೆಯಿಂದ ನಮಗೆ ಮಾತ್ರವಲ್ಲ, ಅನೇಕ ಬಗೆಯ ಚಿಕ್ಕ ಚಿಕ್ಕ ಹಕ್ಕಿಗಳಿಗೂ ಅತ್ಯಂತ ಆಪ್ಯಾಯಮಾನ. ಹಾಗಾಗಿ ಊರಿನಲ್ಲಿ ನಮ್ಮ ಅಂಗಳದಲ್ಲಿರುವ ಮೂರು ದಾಲ್ಚಿನ್ನಿ ಮರದಲ್ಲಿ ಸದಾ ಒಂದಿಲ್ಲೊಂದು ಹಕ್ಕಿಗೂಡು ಇದ್ದೇ ಇರುತ್ತದೆ. ಅವುಗಳ ಚಿತ್ರ ವಿಚಿತ್ರ ಕೂಗು ಸ್ವರ್ಗ ಸದೃಶ ಲೋಕವನ್ನು ಸೃಷ್ಟಿ ಮಾಡುತ್ತದೆ.

ಸಾಮಾನ್ಯ ಹಕ್ಕಿಗಳಲ್ಲದೇ ಗೋಲ್ಡನ್ ಓರಿಯಲ್, ಪ್ಯಾರಡೈಸ್ ಫ್ಲೈ ಕ್ಯಾಚರ್, ನನಗೆ ಹೆಸರು ಗೊತ್ತಿಲ್ಲದ ಹತ್ತು ಹಲವು ಹಕ್ಕಿಗಳ ಕಲರವವನ್ನು ಈ ಮರದ ಕೆಳಗೆ ಕೂತು ಕೇಳಬಹುದು. ಈ ಹಕ್ಕಿಗಳು ಒಮ್ಮೆ ಈ ಮರದ ದಟ್ಟಣೆಯೊಳಗೆ ಸೇರಿದವೆಂದರೆ ಮುಗಿಯಿತು, ಒಂದು ಆಪ್ತ ರಕ್ಷಣಾವಲಯಕ್ಕೆ ಸೇರಿದ ಹಾಗೆ. ಶತ್ರು ಭಯ ಇಲ್ಲದೆ, ಕೊನೇ ಪಕ್ಷ ಕ್ಯಾಮೆರಾ ಕಣ್ಣಿಗೆ ಕೂಡ ಬೀಳದಂತೆ ಹಾಯಾಗಿ ಇರಬಹುದೆಂಬ ಭರವಸೆ.

ಇದಲ್ಲದೆ ಮತ್ತೊಂದು ವಿಶೇಷ ಕೂಡ ದಾಲ್ಚಿನ್ನಿ ಮರದಲ್ಲಿದೆ. ಸಾಮಾನ್ಯವಾಗಿ ಇತರ ಮರಗಳ ತೊಗಟೆ ತೆಗೆದರೆ ಆ ಜಾಗದಲ್ಲಿ ಗಾಯ ಮಾಯ್ದರೂ ತೊಗಟೆ ಬೆಳೆಯುವುದಿಲ್ಲ. ಆದರೆ ದಾಲ್ಚಿನ್ನಿ ಮರದಲ್ಲಿ ತೊಗಟೆ ತೆಗೆದರೆ ಕೆಲವು ತಿಂಗಳಿನಲ್ಲಿ ಪುನಃ ಮೊದಲಿನಂತೆ ತೊಗಟೆ ಬೆಳೆಯುತ್ತದೆ. ಗಾಯದ ಗುರುತೂ ಸಿಗುವುದಿಲ್ಲ. ಆದರೆ ಸುತ್ತ ತೆಗೆಯಬಾರದು. ಅದು ಹೇಗೆ ನಾವು



ತಿನ್ನಲು ಬಳಸುವ ಮರದ ಚಕ್ಕೆಗೆ ಮಾತ್ರ ತನ್ನನ್ನು ತಾನು ಪುನರುಜ್ಜೀವನಗೊಳಿಸಿಕೊಳ್ಳುವ ಗುಣವಿದೆ ಅನ್ನುವುದು ನಿಜಕ್ಕೂ ಆಶ್ಚರ್ಯ. ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಹಿರಿಯರು ಇದನ್ನು ಕಂಡುಕೊಂಡಿದ್ದಾರೆ.

ಇದರ ವೈಜ್ಞಾನಿಕ ಹೆಸರು **Cinnamomum verum.** ಸಾಧಾರಣ ಗಾತ್ರದ ಮರ. ಶ್ರೀಲಂಕಾ ಹಾಗೂ ಪಶ್ಚಿಮ ಘಟ್ಟಗಳಲ್ಲಿ ಬೆಳೆಯುತ್ತದೆ. ದಾಲ್ಚಿನ್ನಿ ಅಥವಾ ಚಕ್ಕೆಯನ್ನು ಆಹಾರದಲ್ಲಿ ವಿಶಿಷ್ಟ ಪರಿಮಳ, ರುಚಿಗೆ ಮಸಾಲೆ ಪದಾರ್ಥವಾಗಿ ಬಳಸುವುದರಿಂದ ವಾಣಿಜ್ಯ ಬೆಳೆಯಾಗಿಯೂ ಬೇಡಿಕೆಯಲ್ಲಿದೆ. ಇಂಥ ಮಸಾಲೆ ಪದಾರ್ಥಗಳಿಗಾಗಿಯೇ ವಿದೇಶಿಯರು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದು ನಮ್ಮನ್ನು ಆಳಿದ್ದು ಈಗ ಇತಿಹಾಸ.

ದಾಲ್ಚಿನ್ನಿ ಔಷಧವಾಗಿ ಕೂಡ ಬಳಕೆಯಾಗುತ್ತದೆ. ದೀಪಾವಳಿ ಸಮಯದಲ್ಲಿ ಹೂ ಬಿಟ್ಟಾಗ ಕೂಡ ದಾಲ್ಚಿನ್ನಿ ಮರ ಅತ್ಯಂತ ಸುಂದರ. ಸಣ್ಣ ಸಣ್ಣ ಬಿಳಿ ಹೂಗಳು ಜೇನುದುಂಬಿಗಳ ಝೇಂಕಾರದಲ್ಲಿ ಅತಿಲೋಕವನ್ನೇ ಸೃಷ್ಟಿಸುತ್ತದೆ. ರಸ್ತೆ ಬದಿ, ಮನೆ ಮುಂದೆ ಒಂದು ದಾಲ್ಚಿನ್ನಿ ಮರ ಇದ್ದರೆ ಹಕ್ಕಿಗಳ ಕಲರವ ಮನೆಗೆ ಕೊಡುವ ಕಳೆಯೇ ಬೇರೆ. ಬಹುತೇಕ ಎಲ್ಲ ಬೀಜಗಳೂ ಸಸಿಯಾಗುತ್ತವೆ. ಹಾಗಾಗಿ ಮಳೆಗಾಲದಲ್ಲಿ ದಾಲ್ಚಿನ್ನಿ ಮರದ ಕೆಳಗೆ ನೂರಾರು ಸಸಿಗಳು ಹುಟ್ಟಿರುತ್ತವೆ. ನಿತ್ಯಹರಿದ್ವರ್ಣ ಎನ್ನುವುದು ನಿರಂತರ ಸೌಂದರ್ಯ ಎಂಬ ಮಾತಿಗೆ ಉಪಮಾನವಾಗಿ ಬಳಕೆಯಲ್ಲಿದೆ. ಅಂತೆಯೇ ದಾಲ್ಚಿನ್ನಿ ಕೂಡ ಎಂದಿಗೂ ಕುಂದದ ಚೆಲುವಿನ ಮರ.

ಪ್ರತಿಕ್ರಿಯಿಸಿ: **feedback@sudha.co.in**